**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.121/2021**

ಪ್ರಾ.ಸಾ. 26

ಚಾ.ಸಾ. 36

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 03.11.2025**

| | |
|---|---|
| ಸಾಕ್ಷಿದಾರರ ಹೆಸರು | ವಿಜಯ್ ಕುಮಾರ್.ಹೆಚ್.ಬಿ. |
| ತಂದೆಯ ಹೆಸರು | ಬಸವರಾಜಪ್ಪ |
| ವಯಸ್ಸು | 39 ವರ್ಷ |
| ಉದ್ಯೋಗ | ಉಪವಿಭಾಗಾಧಿಕಾರಿ, ಹುಣಸೂರು ಸಬ್ ಡಿವಿಷನ್ |
| ವಾಸ | ಮೈಸೂರು |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು 2019 ರಿಂದ 2021 ರವರೆಗೆ ಮದ್ದೂರು ತಾಲ್ಲೂಕು, ತಾಲ್ಲೂಕು ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೇ ದಿನಾಂಕ 06.06.2021 ರಂದು ಮದ್ದೂರು ವೃತ್ತ ನಿರೀಕ್ಷಕರು ಒಂದು ಮನವಿ ನೀಡಿ, ಪ್ರಕರಣ ಸಂಖ್ಯೆ 140/2021 ರಲ್ಲಿ ಮೂರು ಜನ ಆರೋಪಿಗಳಾದ, 2 ನೇ ಆರೋಪಿ ಮಧು ಅಲಿಯಾಸ್ ಕಪ್ಪೆ , 4 ನೇ ಆರೋಪಿ ನಾಗರಾಜು ಅಲಿಯಾಸ್ ನಾಗ ಮತ್ತು 8 ನೇ ಆರೋಪಿ ಅವಿನಾಶ್ ಅಲಿಯಾಸ್ ಇಡ್ಲಿ ಇವರ ಗುರುತು ಪತ್ತೆ ಹಚ್ಚುವ ಕವಾಯತ್ತು ನಡೆಸಲು ಕೋರಿಕೊಂಡರು. ಅವರೆಲ್ಲರೂ ಮಂಡ್ಯ ಜಿಲ್ಲಾ ಕಾರಾಗೃಹದಲ್ಲಿದ್ದಾರೆಂದೂ ಕೂಡ ತಿಳಿಸಿದ್ದಾರೆ. ಅವರು ನೀಡಿದ ಮನವಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ದಿನಾಂಕ 06.06.2021 ರ ತನಿಖಾಧಿಕಾರಿ ನೀಡಿದ

ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.92 ಎಂದು ಗುರುತಿಸಲಾಯಿತು. ಬಳಿಕ ಮೇಲೆ ಹೇಳಿದ ಆರೋಪಿಗಳ ಬಾಬ್ತು ಗುರುತು ಕವಾಯತ್ತು ನಡೆಸುವ ಬಾಬ್ತು ನಾನು ಅಧೀಕ್ಷಕರು ಜಿಲ್ಲಾ ಕಾರಾಗೃಹ, ಮಂಡ್ಯ ಇವರಿಗೆ ದಿನಾಂಕ 13.07.2021 ರಂದು ಪತ್ರ ಬರೆದು ಆರೋಪಿಗಳ ಕವಾಯತ್ತು ಬಾಬ್ತು ವ್ಯವಸ್ಥೆ ಮಾಡಿಕೊಳ್ಳುವಂತೆ ಸೂಚಿಸಿದ್ದೇನೆ. ಸದರಿ ಪತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ದಿನಾಂಕ 13.07.2021ರ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ.93 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.93 ಎ ಎಂದು ಗುರುತಿಸಲಾಯಿತು.

2. ದಿನಾಂಕ 16.07.2021 ರಂದು ಬೆಳಗ್ಗೆ 11.00 ಗಂಟೆಗೆ ಮಂಡ್ಯ, ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿದ್ದೆ. ಅದಕ್ಕೆ ಪೂರ್ವದಲ್ಲಿ ಕವಾಯತ್ತು ಸಮಯದಲ್ಲಿ ಸಾಕ್ಷಿದಾರರಾದ ಜಿ.ಡಿ.ರವಿ ಬಿನ್ ದೊಡ್ಡೈದೇಗೌಡ ರವರನ್ನೂ ಕೂಡ ಹಾಜರು ಇಡುವಂತೆ ತನಿಖಾಧಿಕಾರಿಗೆ ದಿನಾಂಕ 14.07.2021 ರಂದು ಸೂಚಿಸಿದ್ದೇನೆ. ಈ ಸಮಯದಲ್ಲಿ ಸಾಕ್ಷಿದಾರರಿಗೆ ಮೇಲೆ ಹೇಳಿದ ಮೂರೂ ಜನ ಆರೋಪಿಗಳ ಫೋಟೋ ಅಥವಾ ಚಹರೆ ಅಥವಾ ಇತರ ಯಾವುದೇ ಮಾಹಿತಿಯನ್ನು ನೀಡಬಾರದು ಎಂದು ತನಿಖಾಧಿಕಾರಿಗಳಿಗೆ ಸೂಚಿಸಿದ್ದೇನೆ. ನಾನು ಕಾರಾಗೃಹಕ್ಕೆ ಹೋದಾಗ ಸಾಕ್ಷಿ ಜಿ.ಡಿ.ರವಿ ಕಾರಾಗೃಹದ ಹೊರಗಡೆ ಇದ್ದರು. ಕಾರಾಗೃಹಕ್ಕೆ ಭೇಟಿ ನೀಡದ ನಂತರ ಅಧೀಕ್ಷಕರಿಗೆ ಗುರುತು ಹಚ್ಚುವ ಮೂರು ಆರೋಪಿಗಳ ಜತೆಗೆ ಒಟ್ಟು 15 ಜನ ವಿಚಾರಣಾಧೀನ ಖೈದಿಗಳನ್ನು ಹಾಜರುಪಡಿಸಲು ಸೂಚಿಸಿದ್ದೇನೆ. ಅವರೆಲ್ಲರೂ ಸಾಮಾನ್ಯ ಒಂದೇ ಎತ್ತರ, ಸಾಮಾನ್ಯ ಒಂದೇ ವಯಸ್ಸಿನವರು ಆಗಿರಬೇಕೆಂದೂ ಕೂಡ ಸೂಚಿಸಿದೆ. ನನ್ನ ಸೂಚನೆಯಂತೆ 2, 4 ಮತ್ತು 8 ನೇ ಆರೋಪಿಗಳೂ ಸೇರಿ ಒಟ್ಟು 15 ಜನರನ್ನು ಅಧೀಕ್ಷಕರು ಒಂದೇ ಸಾಲಿನಲ್ಲಿ ನಿಲ್ಲಿಸಿದರು.

3. ನಂತರ ನಾನು ಸಾಕ್ಷಿ ಜಿ.ಡಿ.ರವಿಯನ್ನು ಒಳಗೆ ಪ್ರತ್ಯೇಕ ಕರೆದು ಆ 15 ಜನರ ಪೈಕಿ ಈ ಪ್ರಕರಣದ ಆರೋಪಿ 2, 4 ಮತ್ತು 8 ಯಾರು ಎಂದು ಗುರುತಿಸುವಂತೆ ಹೇಳಿದೆ. 15 ಜನರು ಜೈಲಿನ ಆವರಣದೊಳಗೆ ಸಾಲಾಗಿ ನಿಂತಿದ್ದರು. ಸಾಕ್ಷಿ ರವಿ ಅವರ ಎದುರುಗಡೆ ನಿಂತು ಅವರ ಎಡಭಾಗದಿಂದ ಮೂರನೇ ವ್ಯಕ್ತಿಯನ್ನು ಗುರುತಿಸಿದರು. ಆ ಆರೋಪಿ ಸಿಮೆಂಟ್ ಬಣ್ಣದ ಟೀ ಶರ್ಟ್, ಕಪ್ಪು ಬಣ್ಣದ ನೈಟ್ ಪ್ಯಾಂಟು ಧರಿಸಿದ್ದರು. ಬಳಿಕ ತಮ್ಮ ಎಡಭಾಗದಿಂದ 7 ನೇ ವ್ಯಕ್ತಿಯನ್ನು ಗುರುತಿಸಿದರು. ಆ ಆರೋಪಿ ಬಿಳಿ ಬಣ್ಣದ ಟೀ ಶರ್ಟ್, ಸಿಮೆಂಟ್ ಬಣ್ಣದ ಚಡ್ಡಿ ಧರಿಸಿದ್ದರು. ಸಾಕ್ಷಿ ತಮ್ಮ ಎಡಭಾಗದಿಂದ 10 ನೇ ವ್ಯಕ್ತಿಯನ್ನು

ಗುರುತಿಸಿದರು. ಅವರು ಕೆಂಪು ಮತ್ತು ಕಪ್ಪು ಬಣ್ಣ ಚೆಕ್ಸ್ ಶರ್ಟ್ ಧರಿಸಿದ್ದರು, ನೀಲಿ ಬಣ್ಣದ ಚಡ್ಡಿ ಧರಿಸಿದ್ದರು. ನಾನು ಸಾಕ್ಷಿಗೆ ಆ ಮೂರು ಜನ ವ್ಯಕ್ತಿಗಳನ್ನು ಯಾವ ಆಧಾರದಿಂದ ಗುರುತಿಸಿದ್ದೀರಿ ಎಂದು ಕೇಳಿದಾಗ ಅವರು ಆ ಮೂರೂ ಜನ ವ್ಯಕ್ತಿಗಳ ಮುಖ ಚಹರೆಯಿಂದ ಗುರುತಿಸುತ್ತಿದ್ದೇನೆಂದು ಹೇಳಿದರು. ಗುರುತಿಸುವ ಮೊದಲು ನಾನು ಸಾಕ್ಷಿಯನ್ನು ಯಾಕೆ ಬಂದಿದ್ದೀರಿ ಎಂದು ಪ್ರಶ್ನಿಸಿದಾಗ ಕೊಲೆ ಆರೋಪಿಗಳನ್ನು ಗುರುತಿಸಲು ಬಂದಿದ್ದೇನೆಂದು ಹೇಳಿದರು. ಗುರುತಿಸಿದ ಬಳಿಕ ಕೃತ್ಯದ ದಿನ ಆರೋಪಿಗಳನ್ನು ನೋಡಿದ್ದರಿಂದ ಗುರುತಿಸುತ್ತಿದ್ದೇನೆ ಎಂದು ನುಡಿದರು. ಬಳಿಕ ಸಾಕ್ಷಿಯನ್ನು ಹೊರಗೆ ಕಳುಹಿಸಿದೆ. ನಂತರ ನಾನು ಸಾಕ್ಷಿ ರವಿ ಗುರುತಿಸಿದ ಆ ಮೂರು ವ್ಯಕ್ತಿಗಳನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಮಧು, ನಾಗರಾಜು, ಅವಿನಾಶ್ ಎಂದು ಹೇಳಿದರು.

4. ಸಾಕ್ಷಿಯನ್ನು ಹೊರಗಡೆ ಕಳುಹಿಸಿದ ಬಳಿಕ ಸದರಿ ಮೂರು ಜನ ಆರೋಪಿಗಳಿಗೆ ಮತ್ತು ಉಳಿದ 13 ಜನ ಆರೋಪಿಗಳನ್ನು ಬಟ್ಟೆ ಬದಲಾಯಿಸಿ, ಮತ್ತೆ ಆ 15 ಜನರನ್ನು ಸಾಲಾಗಿ ನಿಂತುವಂತೆ ಸೂಚಿಸಿದೆ. ಮತ್ತೆ ಸಾಕ್ಷಿಯನ್ನು ಒಳಗ್ಗೆ ಕರೆಯಿಸಿ, ಆರೋಪಿಗಳನ್ನು ಗುರುತಿಸುವಂತೆ ಸೂಚಿಸಿದೆ. ಸಾಕ್ಷಿ ಮತ್ತೆ ಸದರಿ 15 ಜನರ ಮುಂದೆ ನಿಂತು, ತಮ್ಮ ಎಡಗಡೆಯಿಂದ 4 ನೇಯವರನ್ನು ಗುರುತಿಸಿದರು. ಅವರು ಕೆಂಪು ಮತ್ತು ನೀಲಿ ಬಣ್ಣ ಚೆಕ್ಸ್ ಶರ್ಟ್, ಸಿಮೆಂಟ್ ಬಣ್ಣದ ಚಡ್ಡಿ ಹಾಕಿದ್ದರು. ಮತ್ತೆ ಎಡಭಾಗದಿಂದ 8 ನೇ ವ್ಯಕ್ತಿಯನ್ನು ಗುರುತಿಸಿದರು ಅವರು ಕಾಫಿ ಬಣ್ಣದ ಶರ್ಟ್ ಮತ್ತು ನೀಲಿ ಬಣ್ಣದ ನೈಟ್ ಪ್ಯಾಂಟು ಧರಿಸಿದ್ದರು. ನಂತರ ಸಾಕ್ಷಿ ಎಡಭಾಗದಿಂದ 15 ನೇ ವ್ಯಕ್ತಿಯನ್ನು ನೋಡಿ ಗುರುತಿಸಿದರು. ಅವರು ಬಿಳಿ ನೀಲಿ ಬಣ್ಣ ಚೆಕ್ಸ್ ಶರ್ಟ್ ಮತ್ತು ಕಪ್ಪು ಬಣ್ಣದ ನೈಟ್ ಪ್ಯಾಂಟು ಧರಿಸಿದ್ದರು. ಬಳಿಕ ಸಾಕ್ಷಿ ರವಿಯನ್ನು ಮತ್ತೆ ಹೊರಗೆ ಕಳುಹಿಸಿದೆ. ಸಾಕ್ಷಿ ಗುರುತಿಸಿದ ಆ ಮೂರೂ ಜನರನ್ನು ವಿಚಾರಿಸಿದಾಗ ಅವರು ತಮ್ಮ ಹೆಸರು ಮಧು, ನಾಗರಾಜು ಮತ್ತು ಅವಿನಾಶ್ ಎಂದು ಹೇಳಿದರು. ಸಾಕ್ಷಿ ಅವರನ್ನು ಗುರುತಿಸಿದ ನಂತರ ಯಾವ ಆಧಾರದಲ್ಲಿ ಗುರುತಿಸಿದೆ ಎಂದು ಕೇಳಿದಾಗ, ಸಾಕ್ಷಿ ಮುಖ ಚಹರೆಯ ಆಧಾರದಿಂದ ಗುರುತಿಸಿದ್ದೇನೆ ಎಂದು ಹೇಳಿದರು. ಮುಖ ಚಹರೆ ಹೇಗೆ ಗೊತ್ತಾಯಿತು ಎಂದು ಕೇಳಿದಾಗ ಕೃತ್ಯ ನಡೆದ ದಿನ ಕೃತ್ಯ ನಡೆದಾಗ ಅಂದರೆ ದಿನಾಂಕ 10.05.2021 ರಂದು ನಾನು ಸದರಿ ಆರೋಪಿಗಳನ್ನು ನೋಡಿದ್ದೇನೆಂದು ಹೇಳಿದರು.

5. ಬಳಿಕ ನಾನು ಕವಾಯತ್ತು ಮಾಡಿ ಸಾಕ್ಷಿಯ ಮೂಲಕ ಸದರಿ ಮೂರೂ ಜನ ಆರೋಪಿಗಳನ್ನು ಗುರುತಿಸಿದ ಬಗ್ಗೆ ಕವಾಯತ್ತು ವರದಿಯನ್ನು ಅಲ್ಲಿಯೇ ತಯಾರಿಸಿದ್ದೇನೆ. ವರದಿಗೆ ಸಾಕ್ಷಿಯ ಸಹಿಯನ್ನು ಪಡೆದಿದ್ದೇನೆ. ನಾನು ತಯಾರಿಸಿದ ಗುರುತು ಕವಾಯತ್ತು ವರದಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ತಾನು ತಯಾರಿಸಿದ ವರದಿಯನ್ನು ಗುರುತಿಸಿದ್ದು ಅದು ಈಗಾಗಲೇ ನಿಪಿ.36 ಎಂದು ಗುರುತಿಸಲಾಗಿದೆ. ನಿಪಿ.36 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.36 ಬಿ ಎಂದು ಗುರುತಿಸಲಾಯಿತು. ನಾನು ಗುರುತಿನ ಕವಾಯತ್ತು ನಡೆಸಿ ಸುಮಾರು 4 ವರ್ಷ ಕಳೆದಿದ್ದು ಮತ್ತು ಆ ಮೂರೂ ಜನ ಆರೋಪಿಗಳನ್ನು ನಾನು ಕವಾಯತ್ತು ದಿವಸ ಪ್ರಥಮ ಬಾರಿ ಮತ್ತು ಒಂದೇ ಸಲ ನೋಡಿದ ಕಾರಣ ಈಗ ಮತ್ತೆ ಗುರುತಿಸಲು ಕಷ್ಟ ಸಾಧ್ಯ. ಆ ದಿನ ಗುರುತಿಸುವ ಕವಾಯತ್ತು ಪ್ರಕ್ರಿಯೆ ಮದ್ಯಾಹ್ನ 12.00 ಗಂಟೆಗೆ ಪ್ರಾರಂಭವಾಗಿ 1.30 ಗಂಟೆಗೆ ಮುಗಿದಿದೆ. ಕವಾಯತ್ತು ಮೊದಲು ನಾನು ಸಾಕ್ಷಿಯನ್ನು ಪ್ರಾಥಮಿಕ ಪ್ರಶ್ನೆಗಳನ್ನು ಕೇಳಿದಾಗ ಅವರು ಘಟನೆ ನಡೆದ ದಿನ ಘಟನಾ ಸ್ಥಳದಲ್ಲಿದ್ದೆ ಮತ್ತು ಸದರಿ ಮೂರು ಜನ ಆರೋಪಿಗಳನ್ನು ನೋಡಿದ್ದೇನೆ ಮತ್ತು ಅವರನ್ನು ಗುರುತಿಸಲು ಇಂದು ಬಂದಿದ್ದೇನೆಂದು ಹೇಳಿದರು. ವರದಿ ತಯಾರಿಸಿದ ಬಳಿಕ ಮೂಲ ವರದಿಯನ್ನು ಕವರಿನಲ್ಲಿ ಹಾಕಿ ಅಂಟಿಸಿ, ಸೀಲು ಮಾಡಿ ದಿನಾಂಕ 20.07.2021 ರಂದು ಮಾನ್ಯ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು ಇವರಿಗೆ ಕವಚ ಪತ್ರದ ಜೊತೆಗೆ ಕಳುಹಿಸಿಕೊಟ್ಟಿದ್ದೇನೆ. ಸದರಿ ಕವಚ ಪತ್ರವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ದಿನಾಂಕ 20.07.2021 ರ ಕವಚ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.94 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.94 ಎ ಎಂದು ಗುರುತಿಸಲಾಯಿತು. ನಾನು ಕವಾಯತ್ತು ನಡೆಸುವಾಗ ನನ್ನ ಕಛೇರಿ ಸಿಬ್ಬಂದಿಯನ್ನು ಸಹಾಯಕ್ಕೆ ಕರೆದುಕೊಂಡು ಹೋಗಿದ್ದೆ ಮತ್ತು ವರದಿಯ ಅಂಶಗಳನ್ನು ಅವರಿಗೆ ಉಕ್ತಲೇಖನ ಕೊಟ್ಟು ಬರೆಸಿದ್ದೇನೆ.

ನ್ಯಾಯಾಲಯದ ಪ್ರಶ್ನೆಃ ಕವಾಯತ್ತು ನಡೆಸುವಾಗ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿ ಎಲ್ಲಿದ್ದರು?

ನಾನು ಗುರುತಿಸುವ ಕವಾಯತ್ತು ಕಾರಾಗೃಹದ ಒಳಗೆ ನಡೆಸಿದಾಗ ಅಲ್ಲಿ ತನಿಖಾಧಿಕಾರಿಯಾಗಲೀ ಅಥವಾ ಪೊಲೀಸ್ ಸಿಬ್ಬಂದಿ ಯಾರೂ ಇರಲಿಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಆರ್ ವಿ ವಕೀಲರಿಂದಃ</u>**

ಪಾಟೀ ಸವಾಲಿಗೆ ಆರೋಪಿಗಳ ಪರ ವಕೀಲರು ಕಾಲಾವಕಾಶ ಕೇಳಿರುತ್ತಾರೆ, ಯಾವುದೇ ಸಃಕಾರಣಗಳು ಇಲ್ಲದೇ ಇರುವ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.